6	ಸ.ಹಿ.ಪ್ರಾ. ಶಾಲೆ ಕಾಟಗೊಂಡನಹಳ್ಳಿ	0.9
7	ಸ.ಹಿ.ಪ್ರಾ. ಶಾಲೆ ಸುದ್ದೇಗುಂಟೆ	1.25
8	ಸ.ಕಿ.ಪ್ರಾ. ಶಾಲೆ ಮುದ್ದೇನಹಳ್ಳಿ	1.16
9	ಸ.ಕಿ.ಪ್ರಾ. ಶಾಲೆ ಮುದ್ದಯ್ಯಪಾಳ್ಯ	1.20
10	ಸ.ಹಿ.ಪ್ರಾ. ಶಾಲೆ ಪೂಜಾರಹಳ್ಳಿ	1.16
		ಒಟ್ಟು 10.95
2010–11 ಮತ್ತು 2011–12ನೇ ಸಾಲಿನಲ್ಲಿ ಮೇಜರ್ ದುರಸ್ಥಿಗೆ ಅನುದಾನ ಮಂಜೂರಾಗಿರುವುದಿಲ್ಲ		

ಮಧುಗಿರಿ ಮತಕ್ಷೇತ್ರದಲ್ಲಿ ಶಾಲಾ ಶಿಕ್ಷಕರ ಹುದ್ದೆ ಭರ್ತಿ

659 (1099) ಶ್ರೀಮತಿ ಅನಿತಾ ಕುಮಾರಸ್ವಾಮಿ (ಮಧುಗಿರಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಧುಗಿರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಉಪಾಧ್ಯಾಯರುಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕೊರತೆಯಿರುವ ಶಾಲಾವಾರು ಉಪಾಧ್ಯಾಯರುಗಳ ಮಾಹಿತಿಯನ್ನು ನೀಡುವುದು;

ಇ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರವು ಕ್ರಮ ಕೈಗೊಂಡಿದೆಯೇ? (ಪೂರ್ಣ ಮಾಹಿತಿ ನೀಡುವುದು)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ)

- ಹೌದು
- ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿರುವುದಿಲ್ಲ.

- ಪ್ರೌಢಶಾಲೆಗಳಲ್ಲಿ ಕೊರತೆಯಿರುವ ವಿಷಯ ಶಿಕ್ಷಕರ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಂಡು ಬೋಧನಾ ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸಲಾಗಿದೆ.
- ಖಾಲಿ ಇರುವ ಬಡ್ತಿ ಹುದ್ದೆಗಳಿಗೆ ಬಡ್ತಿ ಮೂಲಕ ಭರ್ತಿ ಮಾಡಲು ಉಪನಿರ್ದೇಶಕರ ಹಂತದಲ್ಲಿ ಕ್ರಮ ಕೈಗೊಳ್ಳ ಲಾಗುತ್ತಿದೆ.

ಆ) ಮಧುಗಿರಿ ಜಿಲ್ಲೆಯಲ್ಲಿ ಕೆಳಗಿನ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ.

1. ಸರ್ಕಾರಿ ಪ್ರೌಢಶಾಲೆ, ಕಡಗತ್ತೂರು	ಆಂಗ್ಲ ಮತ್ತು ವಿಜ್ಞಾನ
2. ಸರ್ಕಾರಿ ಪ್ರೌಢಶಾಲೆ, ಗುಂಡಗಲ್ಲು	ಕಲಾ
3. ಸರ್ಕಾರಿ ಪ್ರೌಢಶಾಲೆ, ಮಿಡಿಗೇಶಿ	ಪಿ.ಸಿ.ಎಂ.
4. ಸರ್ಕಾರಿ ಪ್ರೌಢಶಾಲೆ, ಬೇಡತ್ತೂರು	ಸಿ.ಬಿ.ಝಡ್
5. ಸರ್ಕಾರಿ ಪ್ರೌಢಶಾಲೆ, ಚಿನ್ನೇನಹಳ್ಳಿ	ಸಿ.ಬಿ.ಝಡ್

ಇ) ಹೌದು. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಕ್ರಮವಹಿಸಲಾಗುವುದು.

ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಪ್ರಾರಂಭ

660 (563) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಸರಕಾರ ಉದ್ದೇಶ ಹೊಂದಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ಪ್ರಾಥಮಿಕ ಮತು ಪ್ರೌಢಶಾಲೆಗಳನ್ನು ಪ್ರಾರಂಭಿಸುವುದು ಉದ್ದೇಶಿಸಿದೆ (ಸಂಪೂರ್ಣ ವಿವರ ನೀಡುವುದು);

ಇ) ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಹೊಸದಾಗಿ ಎಷ್ಟು ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಉದ್ದೇಶ ಸರಕಾರದ ಮುಂದಿದೇ?